# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\9053\2017\ಸನಿಕಾಸ-1 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:19/10/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೂರುದಾರರಾದ ಶ್ರೀ.ಕೆ.ಪುಟ್ಟಮಾದಯ್ಯ ಬಿನ್ ಲೇ.ಮಾದಯ್ಯ, ವೀರದೇವನಪುರ, ಚಿನ್ನದಗುಡಿ ಅಂಚೆ, ನಂಜನಗೂಡು ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕ್ ಚಿನ್ನದಗುಡಿ ಅಂಚೆ ವೀರದೇವನಪುರ ನಿವಾಸಿಯಾದ ಶ್ರೀ.ಕೆ.ಪುಟ್ಟಮಾದಯ್ಯ ಬಿನ್ ಲೇ.ಮಾದಯ್ಯ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ನಂಜನಗೂಡು ನಗರಸಭೆಯ ಪೌರಾಯುಕ್ತರಾದ ಶ್ರೀ.ವಿಜಯ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕ್ ವೀರದೇವನಪುರ ಗ್ರಾಮದ ಸರ್ವೆ ನಂ.222 ವಿಸ್ತೀರ್ಣ 3 ಎಕರೆ 35 ಗುಂಟೆ ಜಮೀನು ತಮ್ಮ ತಂದೆ ಶ್ರೀ.ಮಾದಯ್ಯ ಬಿನ್ ಕೊರಕಯ್ಯ ರವರಿಗೆ 1955-60ನೇ ಸಾಲಿನಲ್ಲಿ ಧರಖಾಸ್ತು ಮೂಲಕ ಮಂಜೂರಾಗಿದ್ದು, ಸದರಿ ಜಮೀನು ತಮ್ಮ ತಂದೆ ಮೃತಪಟ್ಟ ನಂತರ ತಮ್ಮ ಹಾಗೂ ತಮ್ಮ ಸಹೋದರರ ನಡುವೆ ಜಂಟಿ ಖಾತೆಯಾಗಿದೆ. ಆದರೆ, ಸದರಿ ಪ್ರದೇಶದಲ್ಲಿ ನಂಜನಗೂಡು ಪುರಸಭೆಯವರು ತ್ಯಾಜ್ಯ ವಸ್ತುಗಳನ್ನು ಸುರಿಯಲು ತಮ್ಮ ಜಮೀನಿನ ಪಕ್ಕದಲ್ಲಿ ಸ್ಥಳ ಮಂಜೂರು ಮಾಡಿಕೊಂಡಿದ್ದು, ಆದರೆ ತಮ್ಮ ಜಮೀನನ್ನು ಸಹ ಒತ್ತುವರಿ ಮಾಡಿಕೊಂಡಿದ್ದಾರೆ. ಈ ಬಗ್ಗೆ ಅಳತೆ ಕಾರ್ಯ ಮಾಡಲಾಗಿ ಎದುರುದಾರರು ತಮ್ಮ ಜಮೀನಿನಲ್ಲಿ ಸುಮಾರು 9.50 ಗುಂಟೆ ಜಮೀನನ್ನು ಒತ್ತುವರಿ ಮಾಡಿರುವುದು ಕಂಡು ಬಂದಿದೆ. ಸದರಿ ಒತ್ತುವರಿಯನ್ನು ತೆರವುಗೊಳಿಸಲು ಜಿಲ್ಲಾಧಿಕಾರಿಗಳು ಮತ್ತು ಎದುರುದಾರರಿಗೆ ಮನವಿ ಸಲ್ಲಿಸಿದ್ದು, ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-

Sd/-

ವೀರೇದೇವನಪುರ ಗ್ರಾಮದ ಸರ್ವೆ ನಂ.187ರ ಪೈಕಿ 7 ಎಕರೆ 20 ಗುಂಟೆ ಸರ್ಕಾರಿ ಜಮೀನನ್ನು ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಉಪವಿಭಾಗಾಧಿಕಾರಿಗಳ ಆದೇಶ ಸಂ:ಎಲ್‌ಎನ್‌ಡಿ.ಸಿಆರ್.135/2004–05ರಂತೆ ಹಸ್ತಾಂತರಿಸಿದೆ. ಈ ಬಗ್ಗೆ 2006ನೇ ವರ್ಷದಲ್ಲಿ ಅಳತೆ ಮಾಡಿ, 11ನೇ ಹಣಕಾಸು ಯೋಜನೆ ಅಡಿ ಸುತ್ತಲೂ ಭೇಲಿ ಹಾಕಿ ವಾಚ್‌ಮನ್ ಕಟ್ಟಡ, ಬೋರ್‌ವೆಲ್ ಕೊರೆದು, ಷೆಡ್‌ಗಳನ್ನು ನಿರ್ಮಿಸಿ, ಘನತ್ಯಾಜ್ಯಗಳನ್ನು ಫಿಟ್ ಗುಂಡಿಗಳನ್ನು ತೆಗೆದು ಸಂಸ್ಕರಿಸಿದೆ. ದೂರುದಾರರ ಸ್ವತ್ತನ್ನು ಒತ್ತುವರಿ ಮಾಡಿಲ್ಲ. ಸದರಿ ಸ್ವತ್ತನ್ನು ಒತ್ತುವರಿ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲವೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ವೀರದೇವನಪುರ ಗ್ರಾಮದ ಸರ್ವೆ ನಂ.222 ವಿಸ್ತೀರ್ಣ 3 ಎಕರೆ 35 ಗುಂಟೆ ಜಮೀನು ದೂರುದಾರರ ತಂದೆ ಶ್ರೀ.ಮಾದಯ್ಯ ಬಿನ್ ಕೊರಕಯ್ಯ ರವರಿಗೆ 1955–60ನೇ ಸಾಲಿನಲ್ಲಿ ಧರಖಾಸ್ತು ಮೂಲಕ ಮಂಜೂರಾಗಿದ್ದು, ಪ್ರಸ್ತುತ ದೂರುದಾರರು ಮತ್ತು ಅವರ ಸಹೋದರರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿದೆ. ಅದೇ ರೀತಿ, ಸದರಿ ಗ್ರಾಮದ ಸರ್ವೆ ನಂ.187ರ 7 ಎಕರೆ 20 ಗುಂಟೆ ಜಮೀನು ಉಪವಿಭಾಗಾಧಿಕಾರಿಗಳ ಆದೇಶದಂತೆ ಸಂ:ಎಲ್‌ಎನ್‌ಡಿ.ಸಿಆರ್.135/2004–05ರಂತೆ ಹಸ್ತಾಂತರಿಸಿದೆ. ಸದರಿ ಸ್ವತ್ತಿನಲ್ಲಿ ಎದುರುದಾರರು ದೂರುದಾರರಿಗೆ ಸಂಬಂಧಪಟ್ಟ 9½ ಗುಂಟೆ ಜಮೀನನ್ನು ಒತ್ತುವರಿ ಮಾಡಿ, ಘನತ್ಯಾಜ್ಯ ಹಾಕಿರುವುದು ದೂರುದಾರರು ಹಾಜರುಪಡಿಸಲಾದ ಸದರಿ ಸ್ವತ್ತಿನ ನಕ್ಷೆಯ ಪ್ರತಿಯನ್ವಯ ಕಂಡು ಬಂದಿದೆ. ಆದರೆ, ಸದರಿ ಒತ್ತುವರಿಯನ್ನು ತೆರವುಗೊಳಿಸುವಂತೆ ಎದುರುದಾರರಿಗೆ ಅರ್ಜಿ ನೀಡಿದ್ದರೂ ಸಹ ಈ ಬಗ್ಗೆ ಎದುರುದಾರರು ಯಾವುದೇ ಕ್ರಮ ಕೈಗೊಂಡಿಲ್ಲ. ದೂರುದಾರರಿಗೆ ಸಂಬಂಧಿಸಿದ 9½ ಗುಂಟೆ ಜಮೀನನ್ನು ಎದುರುದಾರರು ಒತ್ತುವರಿ ಮಾಡಿ, ಸುತ್ತಲೂ ಭೇಲಿ ನಿರ್ಮಿಸಿ ಘನತ್ಯಾಜ್ಯ ಹಾಕಿದ್ದು, ಈ ಬಗ್ಗೆ ದೂರುದಾರರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಯೋಜನಾ ನಿರ್ದೇಶಕರುಗಳಿಗೆ ಮನವಿ ಸಲ್ಲಿಸಿದ್ದು, ಜಿಲ್ಲಾಧಿಕಾರಿಗಳು ಮತ್ತು ಯೋಜನಾ ನಿರ್ದೇಶಕರು ಎದುರುದಾರರು ಮತ್ತು ತಹಶೀಲ್ದಾರ್‌ರವರಿಗೆ ಸದರಿ ಒತ್ತುವರಿಯನ್ನು ತೆರವುಗೊಳಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ ಹಾಗೂ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸದರಿ ಜಮೀನಿನ ನಕ್ಷೆಯನ್ನು ಅಲ್ಲಗಳೆದಿಲ್ಲ. ಎದುರುದಾರರು ದೂರುದಾರರಿಗೆ ಸಂಬಂಧಪಟ್ಟ, ಸರ್ವೆ ನಂ.222ರ 9½ ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದು,

mಲೋಕ/9053/2017

ಅದನ್ನು ತೆರವುಗೊಳಿಸುವಂತೆ ಸಕ್ಷಮ ಪ್ರಾಧಿಕಾರಗಳಿಂದ ಪತ್ರ ವ್ಯವಹಾರ ನಡೆದಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪ ಎಸಗಿದ್ದಾರೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಆದ್ದರಿಂದ, ಸದರಿ ಸರ್ವೆ ನಂ.222ರ 9½ ಗುಂಟೆ ಜಮೀನಿನ ಒತ್ತುವರಿಯನ್ನು ತೆರುವುಗೊಳಿಸುವ ಬಗ್ಗೆ ಕಾನೂನು ರೀತಿ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 24/10/17.

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.